# ನಯನತಾರಾಗೆ ಮಾಂಗಲ್ಯಭಾಗ್ಯ



ನಯನತಾರಾ ನಟಿಸಿರುವ ಹೊಸ ಚಿತ್ರ 'ರಾಮಾಯಣ'ದ ಶೂಟಿಂಗ್ ಮುಗಿದಿದೆ. ಆದರೆ ಅದಕ್ಕೂ ಮುನ್ನ ಆಕೆಯ ಇನ್ನೊಂದು 'ರಾಮಾಯಣ' ಸುದ್ದಿಯಾಗಿದೆ. ಅದು ಆಕೆಯ ಮದುವೆ ರಾಮಾಯಣ!

ನಯನತಾರಾ ಮತ್ತು ಪ್ರಭುದೇವ ಪ್ರೀತಿಸಿದ್ದು ಹಳೇ ಸುದ್ದಿ. ಅವರು ಜತೆಯಾಗಿ ತಿರುಗಾಡಲು ಶುರುವಾಗಿ ವರ್ಷಗಳೇ ಸಂದಿವೆ. ಪ್ರಭುದೇವ ಪ್ರೀತಿಸಿ ಮದುವೆಯಾದ ರಮ್ಲತ್‌ಳನ್ನು ಕೈಬಿಟ್ಟು, ಕೋರ್ಟಿನಲ್ಲಿ ಆಕೆಗೆ ಪರಿಹಾರ ಹಣವನ್ನೂ ಘೋಷಿಸಿಯಾಗಿದೆ. ಇದೀಗ ಪ್ರಭುದೇವ ನಯನತಾರಾಳನ್ನು ಮದುವೆಯಾಗಲು ವೇದಿಕೆ ಸಿದ್ಧವಾಗಿದೆ. ಈ ಸುದ್ದಿ ಓದುವಷ್ಟರಲ್ಲಿ ಮದುವೆ ಊಟ ಮುಗಿದಿರಲೂಬಹುದು.

ಈ ಮದುವೆಗೆ ವಿರೋಧ ಬಂದಿರುವುದು ನಯನತಾರಾಳ ಕುಟುಂಬದಿಂದ. ಹುಟ್ಟಿನಿಂದ ಕ್ರಿಶ್ಚಿಯನ್ ಆಗಿರುವ ನಯನತಾರಾಳ ಮೂಲ ಹೆಸರು ಡಯಾನಾ ಮರಿಯಂ ಕುರಿಯನ್. ತಂದೆ ವಾಯುಪಡೆಯ ಅಧಿಕಾರಿ. ಅಣ್ಣನೊಬ್ಬ ದುಬೈಯಲ್ಲಿದ್ದಾನೆ. ಪ್ರಭುದೇವನನ್ನು ಮದುವೆಯಾಗಲೆಂದೇ ನಯನತಾರಾ ಆಗಸ್ಟ್ ಮೊದಲ ವಾರದಲ್ಲಿ ಚೆನ್ನೈಯ ಆರ್ಯಸಮಾಜದಲ್ಲಿ ಹಿಂದೂ ಧರ್ಮಕ್ಕೆ ಮತಾಂತರ ಹೊಂದಿದ್ದಾಳೆ. ಆಕೆಯ ಶುದ್ಧಿಕರ್ಮಗಳನ್ನು ಮಾಡಿದ ಬಳಿಕ ನಯನತಾರಾ ಎಂದೇ ನಾಮಕರಣ ಮಾಡಲಾಯಿತಂತೆ. ಕುಟುಂಬದವರು ಈ ಮತಾಂತರವನ್ನು ತೀವ್ರವಾಗಿ ವಿರೋಧಿಸಿದ್ದರೂ ನಯನತಾರಾ ಆ ಬಗ್ಗೆ ಕ್ಯಾರೇ ಎಂದಿಲ್ಲ.

ಬೆಂಗಳೂರಿನಲ್ಲಿ ಜನಿಸಿದ ನಯನತಾರಾ ಅಪ್ಪ-ಅಮ್ಮನ ಜತೆಗೆ ಚೆನ್ನೈ, ದೆಹಲಿ, ಜಾಮ್‌ನಗರ ಮುಂತಾಗಿ ಹಲವೆಡೆ ನೆಲೆಸಿದ್ದರಿಂದ ಅಲ್ಲೆಲ್ಲ ವಿದ್ಯಾಭ್ಯಾಸ ನಡೆಯಿತು. ಬಳಿಕ ನೆಲೆಸಿದ್ದು ಕೇರಳದಲ್ಲಿ. 2003ರಲ್ಲಿ ಮಲಯಾಳಂ ಸಿನಿಮಾ 'ಮನಸ್ಸಿನಕ್ಕರೆ'ಯಲ್ಲಿ ಮೊದಲ ನಟನೆ. ಆ ಬಳಿಕ ತಮಿಳು, ತೆಲುಗು, ಕನ್ನಡ, ಹಿಂದಿ ಹೀಗೆ ಚಿತ್ರಜೀವನ ಮುಂದುವರಿಯಿತು. ಹಿಂದೊಮ್ಮೆ ನಿರ್ದೇಶಕ ಎಸ್.ರಾಜೇಂದರ್ ಜತೆಗೂ ಈಕೆಗೆ ಪ್ರೀತಿ ಇತ್ತೆಂಬ ಸುದ್ದಿ ಹಬ್ಬಿತ್ತು. ಆದರೆ ಈಗ ಪ್ರಭುದೇವ ಜತೆಗಿನ ಪ್ರೀತಿಯಂತೂ ಜಗಜ್ಜಾಹೀರಾಗಿದೆ.

'ಪ್ರಭುದೇವ ಹಾಗೆಯೇ ಮದುವೆಯಾಗಬಹುದಿತ್ತು. ಮತಾಂತರ ಏಕೆ ಮಾಡಿಸಿದ್ದು?' ಎನ್ನುವುದು ಹಲವರ ಪ್ರಶ್ನೆ. ಹಿಂದೆ ಆತ ರಮ್ಲತ್‌ಳನ್ನು ಮದುವೆಯಾದಾಗ ಆಕೆ ಇಸ್ಲಾಂನಿಂದ ಮತಾಂತರ ಹೊಂದಿರಲಿಲ್ಲ. ಅದೇನೇ ಇರಲಿ, ಮದುವೆಯಾದ ಬಳಿಕ ಮತ್ತೆ 'ಪ್ರೀತ್ಯಂತರ' ಆಗದಿದ್ದರೆ ಸಾಕು!

■ ಬಿಂದು

